# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 447

ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 30.01.2026

ಉತ್ತರಿಸುವ ಸಚಿವರು : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ನೆರೆ ರಾಜ್ಯವಾದ ಕೇರಳ ಸರ್ಕಾರ ತನ್ನ ಕನ್ನಡ ವಿರೋಧಿ ಧೋರಣೆಯನ್ನು ಮುಂದುವರೆಸಿದ್ದು, ಗಡಿನಾಡಾಗಿರುವ ಕಾಸರಗೋಡು ಕನ್ನಡಿಗರ ಮೇಲೆ ಮಲಯಾಳ ಹೇರಿಕೆಯ ಪ್ರಯತ್ನ ನಡೆಯುತ್ತಲೇ ಇದ್ದು, ಅದರ ಭಾಗವಾಗಿ ಈಗ ಕೇರಳ ಸರ್ಕಾರ ರಾಜ್ಯದಲ್ಲಿ ಮಲಯಾಳ ಭಾಷಾ ಮಸೂದೆಯ ಜಾರಿಗೆ ಮುಂದಾಗಿರುವುದರಿಂದ ಗಡಿನಾಡ ಕನ್ನಡಿಗರು ತಮ್ಮ ಮಾತೃಭಾಷಾ ಕಲಿಕೆಯ ಸ್ವಾತಂತ್ರ್ಯವನ್ನೇ ಕಳೆದುಕೊಳ್ಳಲಿದ್ದು, ಗಡಿನಾಡಿನ ಭಾಷಾ ಅಲ್ಪಸಂಖ್ಯಾತರ ಮೂಲಭೂತ ಹಕ್ಕನ್ನೇ ಕಳೆದುಕೊಳ್ಳುವ ಸಂಕಷ್ಟಕ್ಕೆ ಅವರನ್ನು ದೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಹೌದು</td></tr>
<tr><td>(ಆ)</td><td>ಬಂದಿದ್ದಲ್ಲಿ, ಕರ್ನಾಟಕ ಸರ್ಕಾರ ಗಡಿನಾಡ ಕನ್ನಡಿಗರ ರಕ್ಷಣೆಯ ತನ್ನ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ಇದುವರೆಗೆ ಯಾವುದೇ ಬದ್ಧತೆ ಮತ್ತು ಇಚ್ಛಾಶಕ್ತಿಯನ್ನು ಪ್ರದರ್ಶಿಸದಿರಲು ಕಾರಣಗಳೇನು:</td><td rowspan="2">ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಸಂವಿಧಾನದ ಅನುಚ್ಛೇದ 350 ಬಿ ಅನುಸಾರ ಕೇಂದ್ರ ಸರ್ಕಾರವು ಭಾಷಾ ನಿರ್ದೇಶಕರನ್ನು ಕೇರಳ ರಾಜ್ಯಕ್ಕೆ ಕಳುಹಿಸಿ, ಸಮಸ್ಯೆಯನ್ನು ಪರಿಹರಿಸಬೇಕೆಂದು ರಾಷ್ಟ್ರಪತಿಗಳಿಗೆ ಪತ್ರ ಬರೆದು ಅಗ್ರಹಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ)</td></tr>
<tr><td>ಇ)</td><td>ಈ ರೀತಿಯಲ್ಲಿ ಗಡಿನಾಡ ಕನ್ನಡಿಗರ ಮೂಲಭೂತ ಹಕ್ಕಿಗೆ ಕೊಡಲಿ ಪೆಟ್ಟು ಹಾಕುವ ದುಸ್ಸಾಹಸಕ್ಕೆ ಇಳಿದಿರುವ ಕೇರಳ ಸರ್ಕಾರಕ್ಕೆ ತನ್ನ ವಿರೋಧ, ಪ್ರತಿಭಟನೆ ಸೂಚಿಸುವುದರ ಜೊತೆಗೆ ಗಡಿನಾಡ ಕನ್ನಡಿಗರ ಹಿತರಕ್ಷಣೆಯ ಹೊಣೆಗಾರಿಕೆ ತನ್ನ ಆದ್ಯ ಕರ್ತವ್ಯ ಎಂಬ ಸ್ಪಷ್ಟ ನಿಲುವು ತಿಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು:</td></tr>
<tr><td>ಈ)</td><td>ಗಡಿನಾಡ ಕನ್ನಡಿಗರ ಹಿತರಕ್ಷಣೆ ಹಾಗೂ ಸಮಸ್ತ ಕನ್ನಡಿಗರ ಅಸ್ಮಿತೆಯ ಪ್ರಶ್ನೆಯಾಗಿರುವ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಗಡಿನಾಡ ಕನ್ನಡಿಗರಿಗೆ ತಮ್ಮ ಮಾತೃಭಾಷಾ ಕಲಿಕೆಯ ಸ್ವಾತಂತ್ರ್ಯದ ಹಕ್ಕನ್ನು ದೊರಕಿಸಿಕೊಡಲು ಸರ್ಕಾರ ಈ ಕೂಡಲೇ ಅಗತ್ಯ ಹಾಗು ತ್ವರಿತ ಕ್ರಮ ವಹಿಸುವುದೇ?</td><td>ಕೇರಳ ರಾಜ್ಯವು ಅನುಷ್ಠಾನಗೊಳಿಸಿರುವ ಮಲಯಾಳಂ ಭಾಷಾ ಮಸೂದೆಯನ್ನು ಹಿಂಪಡೆದು ಅಲ್ಪಸಂಖ್ಯಾತ ಭಾಷೆಗಳ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸಲು ಕ್ರಮವಹಿಸಬೇಕೆಂದು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಕೇರಳ ರಾಜ್ಯದ ಮುಖ್ಯಮಂತ್ರಿಗಳಿಗೆ ಪತ್ರದ ಮೂಲಕ ಕೋರಿರುತ್ತಾರೆ.</td></tr>
</table>

ಸಂಖ್ಯೆ: ಕಸಂವಾ 08 ಕೆಒಎಲ್ ಆಕ 2026

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

**DR. PURUSHOTHAMA BILIMALE**
**CHAIRMAN**
Kannada Development Authority

Room No. 205 A & 206
2nd Floor, Vidhan Soudha,
Bengaluru - 560 001.
Telephone Off: 080-22256365
22033519

**NO:KDA/C/ 406 /2026** **Date: 09-01-2026**

**Respected President Madam,**

I am submitting this letter to you as the Chairman of Kannada Development Authority that has the inherent responsibility of protecting the cause of Kannada language, to express my deep concern regarding Malayalam Language Act-2025 brought out by Govt of Kerala that makes the Malayalam language mandatory.

While fully respecting the rightful place of Malayalam as the official language of Kerala, I wish to place on record that the mandatory nature of this Act is causing serious anxiety among large sections of the Kannada-speaking population (over 7.5 lakh Kannadigas) residing in Kerala, particularly in the Kasaragod region. For these communities, who have preserved their linguistic and cultural identity over generations, this move is widely perceived as a death knell to their language and educational rights.

These kinds of linguistic issues bother many states that in return create an unwarranted unrest in peoples' minds. With no sight of a clear solution through mutual discussions and debates between states, they grapple with differences and an obvious dent on federal principles.

In this context, the Union government's role assumes prominence as per the constitutional provisions. I am quoting the Article 350 (b) of the Constitution, here for your kind perusal that is relevant now.

(1) There shall be a Special Officer for linguistic minorities to be appointed by the President.
(2) It shall be the duty of the Special Officer to investigate all matters relating to the safeguards provided for linguistic minorities under this Constitution and report to the President upon those matters at such intervals as the President may direct, and the President shall cause all such reports to be laid before each House of Parliament, and sent to the Governments of the States concerned.

I would humbly request your Excellency to kindly direct the Union Government to immediately appoint a Special officer for Linguistic Minorities. He shall take stock of all problems faced by those residing in border areas, and report to the centre. The Union Government could later intervene to provide a lasting solution to these problems, so the common people on both sides as well as linguistic minorities in the states could lead a peaceful life.

**Sincere regards,**

**Yours Faithfully,**

**(Purushothama Bilimale)**

**Smt Droupadi Murmu,**
**Hon'ble President of India,**
**Rashtrapati Bhavan,**
**New Delhi, Delhi – 110 004.**

**ಕರ್ನಾಟಕ ವಿಧಾನಸಭೆ**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 393(447) |
| **ಸದಸ್ಯರ ಹೆಸರು** | : | ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 30.01.2026 |
| **ಉತ್ತರಿಸುವ ಸಚಿವರು** | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನೆರೆ ರಾಜ್ಯವಾದ ಕೇರಳ ಸರ್ಕಾರ ತನ್ನ ಕನ್ನಡ ವಿರೋಧಿ ಧೋರಣೆಯನ್ನು ಮುಂದುವರೆಸಿದ್ದು, ಗಡಿನಾಡಾಗಿರುವ ಕಾಸರಗೋಡು ಕನ್ನಡಿಗರ ಮೇಲೆ ಮಲಯಾಳ ಹೇರಿಕೆಯ ಪ್ರಯತ್ನ ನಡೆಯುತ್ತಲೇ ಇದ್ದು, ಅದರ ಭಾಗವಾಗಿ ಈಗ ಕೇರಳ ಸರ್ಕಾರ ರಾಜ್ಯದಲ್ಲಿ ಮಲಯಾಳ ಭಾಷಾ ಮಸೂದೆಯ ಜಾರಿಗೆ ಮುಂದಾಗಿರುವುದರಿಂದ ಗಡಿನಾಡ ಕನ್ನಡಿಗರು ತಮ್ಮ ಮಾತೃಭಾಷಾ ಕಲಿಕೆಯ ಸ್ವಾತಂತ್ರ್ಯವನ್ನೇ ಕಳೆದುಕೊಳ್ಳುವ ಸಂಕಷ್ಟಕ್ಕೆ ಅವರನ್ನು ದೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು-ಬಂದಿದೆ. |
| ಆ) | ಬಂದಿದ್ದಲ್ಲಿ, ಕರ್ನಾಟಕ ಸರ್ಕಾರ ಗಡಿನಾಡ ಕನ್ನಡಿಗರ ರಕ್ಷಣೆಯ ತನ್ನ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ಇದುವರೆಗೆ ಯಾವುದೇ ಬದ್ಧತೆ ಮತ್ತು ಇಚ್ಛಾಶಕ್ತಿಯನ್ನು ಪ್ರದರ್ಶಿಸದಿರಲು ಕಾರಣಗಳೇನು; | ಕೇರಳ ಸರ್ಕಾರ ಮಲಯಾಳಂ ಭಾಷಾ ಮಸೂದೆಯನ್ನು ಮಂಡಿಸಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬರುತ್ತಿದ್ದಂತೆ ಕಾಸರಗೋಡಿನ ಕ್ರಿಯಾಶೀಲ ಕನ್ನಡಿಗರ ಸಂಘಟನೆಗಳ ಮೂಲಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಕೇರಳ ರಾಜ್ಯದ ರಾಜ್ಯಪಾಲರನ್ನು ದಿನಾಂಕ:7.01.2021ರಂದು ಬೇಟಿ ಮಾಡಿ ಸದರಿ ಮಸೂದೆಗೆ ಅಂಕಿತ ಹಾಕದಂತೆ ಮನವಿ ಸಲ್ಲಿಸಲಾಗಿದೆ. ರಾಜ್ಯ ಸರ್ಕಾರದಿಂದ ಮಾನ್ಯ ಮುಖ್ಯಮಂತ್ರಿಗಳು ಕೇರಳ ಸರ್ಕಾರಕ್ಕೆ ಪತ್ರ ಬರೆದು ಮಸೂದೆಯನ್ನು ವಾಪಸ್ಸು ಪಡೆಯುವಂತೆ ಕೋರಿರುತ್ತಾರೆ. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ಈ ರೀತಿಯಲ್ಲಿ ಗಡಿನಾಡ ಕನ್ನಡಿಗರ ಮೂಲಭೂತ ಹಕ್ಕಿಗೆ ಕೊಡಲಿ ಪೆಟ್ಟು ಹಾಕುವ ದುಸ್ಸಾಹಸಕ್ಕೆ ಇಳಿದಿರುವ ಕೇರಳ ಸರ್ಕಾರಕ್ಕೆ ತನ್ನ ವಿರೋಧ, ಪ್ರತಿಭಟನೆ ಸೂಚಿಸುವುದರ ಜೊತೆಗೆ ಗಡಿನಾಡ ಕನ್ನಡಿಗರ ಹಿತರಕ್ಷಣೆಯ ಹೊಣೆಗಾರಿಕೆ ತನ್ನ ಆದ್ಯ ಕರ್ತವ್ಯ ಎಂಬ ಸ್ಪಷ್ಟ ನಿಲುವು ತಿಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಮಲಯಾಳಂ ಭಾಷಾ ಮಸೂದೆಯನ್ನು ಹಿಂಪಡೆಯುವಂತೆ ಕೇರಳ ಸರ್ಕಾರದ ಮೇಲೆ ಎಲ್ಲಾ ರೀತಿಯ ಒತ್ತಡಗಳನ್ನು ಹಾಕುವುದರ ಮೂಲಕ ರಾಜ್ಯ ಸರ್ಕಾರವು ತನ್ನ ಹೊಣೆಗಾರಿಕೆಯನ್ನು ನಿಭಾಯಿಸಿರುತ್ತದೆ. |
| ಈ) | ಗಡಿನಾಡ ಕನ್ನಡಿಗರ ಹಿತರಕ್ಷಣೆ ಹಾಗೂ ಸಮಸ್ತ ಕನ್ನಡಿಗರ ಅಸ್ಮಿತೆಯ ಪ್ರಶ್ನೆಯಾಗಿರುವ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಗಡಿನಾಡ ಕನ್ನಡಿಗರಿಗೆ ತಮ್ಮ ಮಾತೃಭಾಷಾ ಕಲಿಕೆಯ ಸ್ವಾತಂತ್ರ್ಯದ ಹಕ್ಕನ್ನು ದೊರಕಿಸಿಕೊಡಲು ಸರ್ಕಾರ ಈ ಕೂಡಲೇ ಅಗತ್ಯ ಹಾಗೂ ತ್ವರಿತ ಕ್ರಮವಹಿಸುವುದೇ? | ಹೌದು ಎಲ್ಲಾ ಅಗತ್ಯ ಕ್ರಮವನ್ನು ವಹಿಸಿದೆ. |

(ಡಿ.ಸುಧಾಕರ್)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.